**<u>3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.</u>**

**<u>ಎಸ್.ಸಿ. ಸಂಖ್ಯೆ: 66/2013</u>**

ದಿನಾಂಕ: 22.09.2022
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ಚಾಸಾ - 30 ಪ್ರಾಸಾ - 16

| | | |
|---|---|---|
| ಹೆಸರು | : | ಆರ್.ರವಿಪ್ರಕಾಶ್ |
| ತಂದೆಯ ಹೆಸರು | : | ಎಂ.ರಾಮಸ್ವಾಮಿ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಪೊಲೀಸ್ ಇನ್ಸ್ ಪೆಕ್ಟರ್, ರಾಜ್ಯ ಅಪರಾಧ ದಾಖಲಾತಿ ವಿಭಾಗ, ಬೆಂಗಳೂರು |
| ವಾಸಸ್ಥಳ | : | ಬೆಂಗಳೂರು. |

**<u>ಮುಖ್ಯವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:</u>**

ನಾನು ದಿನಾಂಕ 02.06.2010 ರಿಂದ 28.05.2012 ರವರೆಗೆ ಮಾಗಡಿ ಪೊಲೀಸ್ ಠಾಣೆಯಲ್ಲಿ ಪಿಎಸ್ಐ ಆಗಿ ಕೆಲಸ ಮಾಡಿದ್ದೆ.

2. ದಿನಾಂಕ 12.04.2012 ರಂದು ಉಪ ವಲಯ ಅರಣ್ಯಾಧಿಕಾರಿಗಳು ನೀಡಿದ ಲಿಖಿತ ದೂರಿನ ಆಧಾರದ ಮೇಲೆ ಠಾಣಾ ಯುಡಿಆರ್ ಸಂಖ್ಯೆ 12/2012 ಪ್ರಕರಣ ದಾಖಲಿಸಿ ಮರುದಿನ ದಿನಾಂಕ 13.04.2012 ರಂದು ಸಾವನದುರ್ಗ ಅರಣ್ಯ ಪ್ರದೇಶದ ಜೋಡುಗಟ್ಟೆ ಎಂಬಲ್ಲಿಗೆ ಹೋದೆ. ಅಲ್ಲಿ ಪಂಚರ ಸಮಕ್ಷಮ ಮೃತ ದೇಹದ ಶವ ತನಿಖಾ ವರದಿ ತಯಾರಿಸಿದೆ. ಅದು ಈಗಾಗಲೇ ನಿಶಾನೆ

ಪಿ 3 ಎಂದು ಗುರುತಿಸಿದ್ದು, ಸಹಿಯನ್ನು ನಿಶಾನೆ ಪಿ 3(ಬಿ) ಎಂದು ಗುರುತಿಸಿದೆ.

3. ವೈದ್ಯಾಧಿಕಾರಿಗಳಿಗೆ ಮೃತ ದೇಹದ ತಲೆಬುರುಡೆ ಮತ್ತು femur ಮೂಳೆಯನ್ನು ಶವದ ಲಿಂಗ ಪತ್ತೆ ಹಚ್ಚಲು ಮತ್ತು ಸಾವಿಗೆ ಕಾರಣವನ್ನು ನಿರ್ಧರಿಸಲು ಶೇಖರಿಸಿಕೊಡುವಂತೆ ಮನವಿ ಮಾಡಿದೆ. ಆನಂತರ ಮೃತ ದೇಹವನ್ನು ಅರಣ್ಯ ಪ್ರದೇಶದಲ್ಲಿ ದಫನ್ ಮಾಡಿಸಿದೆ. ಆ ಪಂಚನಾಮೆಯನ್ನು ನಿಶಾನೆ ಪಿ 16 ಎಂತಲೂ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಶಾನೆ ಪಿ 16(ಎ) ಎಂದು ಗುರುತಿಸಿದೆ.

**<u>ಪಾಟೀಸವಾಲುಃ ಶ್ರೀ.ಕೆ.ತಿಮ್ಮೇಗೌಡ ವಕೀಲರಿಂದಃ ಆರೋಪಿ ಪರವಾಗಿಃ-</u>**

4. ಸಾವನದುರ್ಗ ಅರಣ್ಯ ಪ್ರದೇಶ ರಕ್ಷಿತ ಅರಣ್ಯ ಪ್ರದೇಶ ಎಂದರೆ ಸರಿ. ಅಲ್ಲಿ ಆನೆ, ಚಿರತೆ, ಕರಡಿ, ಕಾಡುನಾಯಿ, ಜಿಂಕೆ ಮೊದಲಾದ ವನ್ಯಜೀವಿಗಳು ಸಾಕಷ್ಟು ಇವೆ ಎಂದರೆ ಸಾಕ್ಷಿಯು ಆನೆ ಮಾತ್ರ ಕಂಡು ಬರುತ್ತದೆ ಎನ್ನುತ್ತಾರೆ. ಸಾವನದುರ್ಗ ಅರಣ್ಯ ಪ್ರದೇಶ ಸಾವಿರಾರು ಎಕರೆ ವಿಸ್ತಾರವಾಗಿದೆ ಎಂದರೆ ಸರಿ. ಸಾವನದುರ್ಗ ಅರಣ್ಯ ಪ್ರದೇಶ ರಕ್ಷಿಸಲು ಪ್ರತ್ಯೇಕ ಪೊಲೀಸ್ ಫೋರ್ಸ್ ಇದೆ ಎಂದರೆ ಸರಿಯಲ್ಲ.

5. ಅದು ಬೆಂಗಳೂರಿಗೆ ಸಮೀಪವಿರುವುದರಿಂದ ಸಾಕಷ್ಟು ಜನ ಅಲ್ಲಿಯ ಸೌಂದರ್ಯ ವೀಕ್ಷಿಸಲು ಮತ್ತು ದೇವಸ್ಥಾನಕ್ಕೆ ಭೇಟಿ ನೀಡಲು

ಬರುತ್ತಾರೆ ಎಂದರೆ ಸರಿ. ಹಲವಾರು ಬಾರಿ ಅಲ್ಲಿರುವ ಜನರ ಮೇಲೆ ಆನೆ ಮತ್ತು ಇತರ ವನ್ಯ ಜೀವಿಗಳ ದಾಳಿಯಾಗಿವೆ ಎಂದರೆ ಸಾಕ್ಷಿಯು ಆನೆ ದಾಳಿಯಾದ ಬಗ್ಗೆ ಮಾತ್ರ ಗೊತ್ತು ಎನ್ನುತ್ತಾರೆ. ಇಂತಹ ನೂರಾರು ಪ್ರಕರಣಗಳು ಆಗಿವೆ ಎಂದರೆ ಸರಿ. ಅಂತಹ ಕೆಲವಾರು ಪ್ರಕರಣಗಳು ದೂರು ದಾಖಲಾಗುವುದಿಲ್ಲ ಎಂದರೆ ಸರಿಯಲ್ಲ. ಅವಶೇಷಗಳು ಸಿಕ್ಕಿದರೆ ಮಾತ್ರ ದೂರು ನೀಡುತ್ತಾರೆ ಎಂದರೆ ಸರಿಯಲ್ಲ.

6. ಜೋಡುಗಟ್ಟೆಯು ಮಾಗಡಿಯಿಂದ ನಾಯಕನಪಾಳ್ಯ ಗೇಟ್ ಮಧ್ಯದಲ್ಲಿ ಇರುತ್ತದೆ. ಅದು ರಾಮನಗರ ಮತ್ತು ಮಾಗಡಿ ರಸ್ತೆಯಲ್ಲಿ ಇರುತ್ತದೆ ಎಂದರೆ ಸರಿ. ರಾಮನಗರದಿಂದ ಮಾಗಡಿಗೆ ಬರಲು ಅದೇ ರಸ್ತೆಯನ್ನು ಉಪಯೋಗಿಸುತ್ತಾರೆ ಎಂದರೆ ಸರಿ.

7. ಎಫ್.ಎಸ್.ಎಲ್. ವರದಿ ಇಲ್ಲದೇ ಆ ಮೃತ ದೇಹವು ಮನುಷ್ಯರದ್ದೋ ಅಲ್ಲವೋ ಎಂದು ನಿರ್ಧರಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ಅಸ್ಥಿಪಂಜರ ಇತ್ತು ಮತ್ತು ಕೆಲವು ಭಾಗದಲ್ಲಿ ಚರ್ಮ ಕೂಡ ಇತ್ತು. ನಮ್ಮ ಯಾವುದೇ ದಾಖಲಾತಿಯಲ್ಲಿ ಚರ್ಮ ಇದ್ದ ಬಗ್ಗೆ ನಮೂದಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ಅಂದಾಜಿನ ಪ್ರಕಾರ ಸಾವು ಸಂಭವಿಸಿ 20-30 ದಿನ ಆಗಿದೆ. ಶವಪಂಚನಾಮೆ ಮಾಡಲು ಯಾವುದೇ ಸಾಕ್ಷಿದಾರರನ್ನು ನೋಟಿಸ್ ನೀಡಿ ಕರೆದಿಲ್ಲ ಮತ್ತು ಅದನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಮೃತ ದೇಹ ದಫನ್

ಮಾಡಲು ಅರಣ್ಯ ಇಲಾಖೆಯಿಂದ ಪ್ರತ್ಯೇಕ ಅನುಮತಿ ಪಡೆದಿಲ್ಲ ಆದರೆ ನಮ್ಮ ಜೊತೆ ಅರಣ್ಯ ಇಲಾಖೆ ಸಿಬ್ಬಂದಿಗಳು ಇದ್ದರು. ದಫನ್ ಮಾಡಿದವರ ಮಾಹಿತಿಗಳನ್ನು ನಾವು ತಿಳಿಸಿಲ್ಲ ಎಂದರೆ ಸರಿಯಲ್ಲ.

8. ನಾವು ಯಾವುದೇ ಮೃತ ದೇಹ ದಫನ್ ಮಾಡಿಲ್ಲ ಮತ್ತು ಅದಕ್ಕೆ ಸಂಬಂಧಪಟ್ಟ ಯಾವುದೇ ಪ್ರಕ್ರಿಯೆ ಮಾಡಿಲ್ಲ ಎಂದರೆ ಸರಿಯಲ್ಲ. ನಿಶಾನೆ ಪಿ 3 ಮತ್ತು 16 ನ್ನು ಈ ಕೇಸಿಗೋಸ್ಕರ ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸೃಷ್ಟಿಸಿದ ದಾಖಲೆಗೆ ಅನುಗುಣವಾಗಿ ಈ ದಿನ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ದೇವರಾಜ ಭಟ್ಟ ಎಂ.)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.